**ದಿನಾಂಕಃ 04-11-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ- ಆರೋಪಿತರ ಪರವಾಗಿ ಶ್ರೀ ಪಿ.ಸಿ.ಕೆ.ಆರ್. ವಕೀಲರಿಂದ.**

ನನ್ನ ಅಣ್ಣನ ಮಗ ಮತ್ತು ಆರೋಪಿತರು ಜೊತೆಯಲ್ಲಿ ಕೆಲಸಕ್ಕೆ ಹೋಗುತ್ತಿರಲಿಲ್ಲ. ಆರೋಪಿ ಚಲಪತಿ ಗಾರೆ ಕೆಲಕ್ಕೆ ಬೇರೆ ಕಡೆ ಹೋಗುತ್ತಿತದ್ದ ಎಂದರೆ ಸರಿಯಲ್ಲ. ಆರೊಪಿ ಶಿವಕುಮಾರ್ ಆಟೋ ಓಡಿಸುತ್ತಾನೆ ಎಂದರೆ ನಿಜ. ಆರೋಪಿ ನಾಗೇಶ ಬುಲೇರಾ ವಾಹನ ಚಾಲಕ ಎಂದರೆ ನಿಜ. ಸದರಿ ವಾಹನದಲ್ಲಿ ಅವರು ಹಣ್ಣುಗಳನ್ನು ಬೇರೆ ಬೇರೆ ಊರುಗಳಿಗೆ ಸಾಗಿಸುತ್ತಾರೆ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿರುವುದಿಲ್ಲ ಮತ್ತು ನನಗೆ ಯಾವತ್ತೂ ಪೊಲೀಸರು ಸಿಕ್ಕಿರುವುದಿಲ್ಲ. ನನಗೆ ಯಾವ ದಿನಾಂಕದಂದು ಆರೋಪಿತರು ಮೊಲ ಬೇಟೆ ಹಂಚಿಕೊಳ್ಳುವ ವಿಚಾರದಲ್ಲಿ ಜಗಳ ವಾಗಿರುತ್ತದೆ ಎಂದು ನನಗೆ ಹೇಳಲು ಆಗುವುದಿಲ್ಲ. ಯಾವ ದಿನಾಂಕದಂದು ನಾನು ಜಗಳ ಬಿಡಿಸಿ ಬುದ್ದಿವಾದ ಹೇಳಿರುತ್ತೇನೆಂದು ನನಗೆ ನೆನಪಿರುವುದಿಲ್ಲ. ಮೊದಲಿನ ಜಗಳದ ಬಗ್ಗೆ ಪೊಲೀಸರಿಗೆ ಪಿರ್ಯಾದಿ ಕೊಟ್ಟಿರುವುದಿಲ್ಲ. ನಾವು ಬುದ್ದಿವಾದ ಊರಿನಲ್ಲಿ ಹೇಳಿರುತ್ತೇವೆ. ನಾವು ಬುದ್ದಿವಾದ ಹೇಳಿರುವುದನ್ನು ಊರಿನವರು ನೋಡಿರುತ್ತಾರೆ. ಆದರೆ ನನಗೆ ಅವರ ಹೆಸರು ಹೇಳಲು ಆಗುವುದಿಲ್ಲ. ಯಾವುದೇ ದಿವಸ ಆರೋಪಿತರು ಮತ್ತು ನನ್ನ ಅಣ್ಣನ ಮಗ ಮೊಲದ ಬೇಟೆಯ ಹಂಚಿಕೆ ವಿಷಯದಲ್ಲಿ ಜಗಳ ಆಗಿರುವುದಿಲ್ಲ ಮತ್ತು ನಾವು ಬುದ್ದಿವಾದ ಹೇಳಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಯಾವುದೇ ಘಟನೆ ಆಗದೇ ಇದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಣ್ಣ ಯಾವಾಗ 3 ನೇ ಆರೋಪಿಗೆ ದುಡ್ಡು ಕೊಟ್ಟಿದ್ದ ಎಂದು ನನಗೆ ಗೊತ್ತಿಲ್ಲ, ಆದರೆ 50 ಸಾವಿರ ರೂಪಾಯಿ ಕೊಟ್ಟಿದ್ದ. ನನ್ನ ಅಣ್ಣ 3 ನೇ ಆರೋಪಿ ಹೋರಿ ಖರೀದಿ ಮಾಡಲು ಹಣ ಕೊಟ್ಟಿರುವುದಿಲ್ಲ 3 ನೇ ಆರೋಪಿ ವಾಪಸ್ಸು ಕೊಡುತ್ತೇನೆ ಎಂದು ಹೇಳಿರುವುದಿಲ್ಲ ಮತ್ತು ಯಾವುದೇ ವ್ಯವಹಾರ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಘಟನೆಯನ್ನು ಸೃಷ್ಟಿ ಮಾಡಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಣ್ಣನ ಮಗ ಆರೋಪಿತರ ಜೊತೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. "***ನಾನು ಆರೋಪಿ ನಾಗೇಶನ ಹೊತ್ತಲ್ಲದ ಹೊತ್ತಿನಲ್ಲಿ***

ಚಾಸಾ-9

*ಏಕೆ ಹೋಗುತ್ತೀರಿ ಗಲಾಟೆ ಮಾಡಿಕೊಳ್ಳಬೇಡಿ ಮತ್ತು ಸುದೀಪ್‌ನಿಗೆ ಹೊಗಬೇಡ ನಾಗೇಶ ಬೇಗ ಹೋಗಿ ಬಂದುಬಿಡುತ್ತೇವೆ ನಾಗೇಶ ಮತ್ತು ಸುದೀಪ ನನಗೆ ಸೇರಿದ ಮೊಟರ್ ಸೈಕಲ್ ಮೇಲೆ ಹೋಗಿರುತ್ತಾರೆ. ನನಗೆ ಅನುಮಾನ ಬಂದು ನಾನು ಬೆಲ್ಲದ ಮರದ ಹತ್ತಿರ ಕೂತಿಕೊಂಡಿದ್ದೆ ಆಗ ಆರೋಪಿ ಚಲಪತಿ, ನಾಗೇಶ, ಶಿವಕುಮಾರ, ಸುದೀಪ ಮತ್ತು ಚಾಸಾ-10 ಓಬಳೇಶ ಎಲ್ಲರೂ ಬೇಟೆಗೆ ಹೋಗುತ್ತಿದ್ದರು. ಆ ಸಮಯದಲ್ಲಿ ಅಲ್ಲಿಯೇ ಕೂತಿದ್ದ ನನ್ನ ಅಣ್ಣ ಹೋಗಬೇಡಿ ಎಂದು ಹೇಳಿದ ಆಗ ಅವರು ಅರ್ಧ ಗಂಟೆಯಲ್ಲಿ ಬರುತ್ತೇವೆ ಎಂದು ಹೇಳಿ ಹೋದರು. ರಾತ್ರಿ 3-00 ಗಂಟೆವರೆಗೂ ಕಾಯ್ದುರೂ ಕೂಡ ಸುದೀಪ ಮನೆಗೆ ವಾಪಸ್ಸು ಬರಲಿಲ್ಲ. ನಂತರ ನಾನು ಹೋಗಿ ನನ್ನ ಅಣ್ಣ ಚಾಸಾ-6 ರವರನ್ನು ಎಬ್ಬಿಸಿ ಸುದೀಪ ಇನ್ನೂ ಬಂದಿಲ್ಲ ಎಂದು ಕೇಳಿದೆ"* ಈ ಮೇಲೆ ಹೇಳಿದ ವಿಷಯವನ್ನು ಪೊಲೀಸರ ಮುಂದೆ ಹೇಳಿರುವುದಿಲ್ಲ. ನಾನು ಮತ್ತು ನನ್ನ ಅಣ್ಣ ಆರೋಪಿ ನಾಗೇಶ್ ಮನೆ ಹತ್ತಿರ ಹೋಗಿ ಸುದೀಪನ ಬಗ್ಗೆ ವಿಚಾರ ಮಾಡಿರುವುದಿಲ್ಲ ಮತ್ತು ಆರೊಪಿ ನಾಗೇಶ ನಾವು ರಾತ್ರಿ 10-00 ಗಂಟೆಗೆ ವಾಪಸ್ಸು ಬಂದಿರುತ್ತೇವೆ ನಮ್ಮ ಜೊತೆ ಸುದಿಪ್ ವಾಪಸ್ಸು ಬಂದಿರುವುದಿಲ್ಲ ಎಂದು ಹೇಳಿರುವುದಿಲ್ಲ ಎಂದರೆ ಸರಿಯಲ್ಲ.

ಸುದೀಪ ಕೂಲಿ ಕೆಲಸ ಮಾಡುತ್ತಿದ್ದ. ನಮ್ಮ ಕುಟುಂಬಕ್ಕೆ 3 ಎಕರೆ ಜಮೀನು ಇರುತ್ತದೆ. ನಾವು ಒಟ್ಟು ಕುಟುಂಬದಲ್ಲಿ ವಾಸ ಮಾಡುತ್ತಿದ್ದೇವೆ. ನಾವೆ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದರೂ ಮತ್ತು ನಮಗೆ ಹೆಚ್ಚಿನ ಜಮೀನು ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುದೀಪ್ ಕೂಲಿ ಕೆಲಸಕ್ಕೆ ಹೋಗುತ್ತಿರಲಿಲ್ಲ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಎಂದರೆ ಸರಿಯಲ್ಲ. ಸುದೀಪ ಯಾರ ಜೊತೆಯಲ್ಲಿ ಬೆರೆಯುತ್ತಿರಲಿಲ್ಲ ಆತನಿಗೆ ದುಭ್ಯಾಸಗಳು ಇದ್ದವು ಎಂದರೆ ಸರಿಯಲ್ಲ. ಸುದೀಪ ಆಂಧ್ರ ಬಾರ್ಡ್ ಯಾಕಾರ್ಲಹಳ್ಳಿ, ಕಡಗತ್ತೂರು ಹೋಗಿ ಸೇಂದಿ ತಂದು ಮಾರಾಟ ಮಾಡುತ್ತಿದ್ದ ಎಂದರೆ ಸುಳ್ಳು. ಈ ವಿಚಾರವಾಗಿ ಅಬಕಾರಿ ಪೊಲೀಸರು ಎಚ್ಚರಿಕೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸೇಂದಿ ಮಾರಾಟ ಮಾಡಿ ಬಂದ ಹಣವನ್ನು ತನ್ನ ಕೆಟ್ಟ ಚಟಗಳಿಗೆ ಹಣವನ್ನು ಉಪಯೋಗಿಸುತ್ತಿದ್ದ ಎಂದರೆ ಸುಳ್ಳು. ಯಾಕಾರ್ಲಹಳ್ಳಿ, ಕಡಗತ್ತೂರು ಸುದೀಪ ಹೋಗುತ್ತಿರುವಾಗ ವಾಹನ ಅಪಘಾತವಾಗಿ ತೀರಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ವಾಹನ ಅಪಘಾತದಲ್ಲಿ ಸುದೀಪ್ ತೀರಿಕೊಂಡಿದ್ದರಿಂದ ರಸ್ತೆ ಅಪಘಾತ ಕೇಸು ಎಂದು ದಾಖಲಾಗಿತ್ತು ಎಂದರೆ ಸರಿಯಲ್ಲ.

ಸದರಿ ಕೇಸು ಹಿಟ್ ಅಂಡ್ ರನ್ ಕೇಸು ಎಂದು ಕೊಡಿಗೇನಹಳ್ಳಿ ಪೊಲೀಸರು ಗಾಡಿ ಸಿಗದೇ ಇದ್ದದ್ದರಿಂದ ಕೇಸು ರಿಜಿಸ್ಟರ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆದ್ದರಿಂದಲೇ ಶವವನ್ನು ಮತ್ತು ಮೋಟಾರು ಬೈಕನ್ನು ಪೊಲೀಸರು ತುಮಕೂರು ಆಸ್ಪತ್ರೆಗೆ ಸಾಗಿಸಿರುತ್ತಾರೆ ಎಂದರೆ ಸುಳ್ಳು. ಶವವನ್ನು ಯಾರೂ ಗುರುತಿಸದೇ ಇದುದ್ದರಿಂದ ಶವವನ್ನು ತುಮಕೂರು ಆಸ್ಪತ್ರೆಯಲ್ಲಿ ಇಟ್ಟಿದ್ದರು ಎಂದರೆ ನಿಜ. ಎಲ್ಲಾ ವಾಟ್ಸ್ ಅಫ್ ಗ್ರೂಪ್‌ಗಳಿಗೆ ಸುದೀಪನ ಶವದ ಪೊಟೋ ಪೊಲೀಸರು ಹಾಕಿದ್ದರು, ನನ್ನ ವಾಟ್ಸ್ ಅಫ್ ಗ್ರೂಪ್ ಬಂದಿತ್ತು. ಯಾವ ನಂಬರ್ ನಿಂದ ವಾಟ್ಸ್ ಅಫ್ ಬಂದಿತ್ತು ಎಂದು ನನಗೆ ಹೇಳಲು ಆಗುವುದಿಲ್ಲ ಈಗ ನನ್ನ ಮೊಬೈಲ್ ಕಳೆದು ಹೋಗಿದೆ. ಪೊಲೀಸರು ಯಾವುದೇ ವಾಟ್ಸ್ ಅಫ್ ಗ್ರೂಪ್ ಗೆ ಸುದೀಪನ ಪೊಟೋ ಹಾಕಿರಲಿಲ್ಲ ಎಂದರೆ ಸರಿಯಲ್ಲ.

ನಾನು ಆಟೋದವರಿಗೆ ವಿಚಾರ ಮಾಡಿರುತ್ತೇನೆ. ನಾನು ಆಟೋದವರನ್ನು ವಿಚಾರಣೆ ಮಾಡಿರುವುದಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮಗ ಕಾಣೆಯಾದ 3 ದಿವಸಕ್ಕೆ ವಾಟ್ಸ್ ಅಫ್ ಗ್ರೂಪ್ ನಲ್ಲಿ ಶವದ ಪೊಟೋ ಬಂದಿರುತ್ತದೆ. ನಾನು ಶನಿವಾರ ದಿನ ಕೊಡಿಗೇನಹಳ್ಳಿ ಪೊಲೀಸ್ ಠಾಣೆಗೆ ಹೋಗಿದ್ದೆ ದಿನಾಂಕ ಗೊತ್ತಿರುವುದಿಲ್ಲ. ನಾನು ಕೊಡಿಗೇನಹಳ್ಳಿ ಪೊಲೀಸ್ ಠಾಣೆಗೆ ಮತ್ತು ತುಮಕೂರು ಆಸ್ಪತ್ರೆಗೆ ಹೋಗಿರುವುದಿಲ್ಲ ಮತ್ತು ನಾನು ಶವವನ್ನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಚಿಕ್ಕಪ್ಪ ಪುಟ್ಟರಂಗಯ್ಯ ರಸ್ತೆ ಅಪಘಾತದ ಪ್ರಕರಣವಲ್ಲ ಕೊಲೆ ಎಂದು ದೂರು ಕೊಟ್ಟಿರುತ್ತಾರೆ. ಶವವನ್ನು ನಮಗೆ ಹಸ್ತಾತರ ಮಾಡಿದ ಮರು ದಿನ ಪೊಲೀಸರಿಗೆ ಪಿರ್ಯಾದಿ ಕೊಡಲು ಹೋದಾಗ ಪೊಲೀಸರು ಪಿರ್ಯಾದಿ ತೆಗೆದುಕೊಂಡಿರುವುದಿಲ್ಲ. ಆದ್ದರಿಂದ ನಾವು ರಿಜಿಸ್ಟರ್ ಪೋಸ್ಟ್ ಮೂಲಕ ಕಳುಹಿಸಿರುತ್ತೇವೆ. ಈ ಬಗ್ಗೆ ನನ್ನ ಬಳಿ ಅಂಚೆ ಸ್ವೀಕೃತಿ ಇರುತ್ತದೆ. ಕೋಡಿಗೇನಹಳ್ಳಿ ಪೊಲೀಸರು ಪಿರ್ಯಾದಿ ತೆಗೆದುಕೊಳ್ಳದೇ ಇದುದ್ದರಿಂದ ಅವರ ಮೇಲಾಧಿಕಾರಿಗಳಿಗೆ ಪಿರ್ಯಾದಿ ಕೊಟ್ಟಿರುವುದಿಲ್ಲ.

ನಮ್ಮ ಮತ್ತು ಆರೊಪಿತರ ನಡುವೆ ಇರುವ ಹಳೇ ದ್ವೇಷದಿಂದ ಮತ್ತು ರಾಜಕೀಯ ದ್ವೇಷದಿಂದ ಚಿಕ್ಕಬಳ್ಳಾಪುರದ ಮಾಜಿ ಎಂ.ಎಲ್. ಸುಧಾಕರ್ ರವರ ಶಿಪಾರಸ್ಸಿನ ಮೇರೆಗೆ ಆರೋಪಿತರ ವಿರುದ್ದ ಸುಳ್ಳು ದೂರನ್ನು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸುದೀಪ ರಸ್ತೆ

ಅಪಘಾತದಲ್ಲಿ ಮರಣಹೊಂದಿದ್ದರೂ ಕೂಡ ಆರೋಪಿತರಿಗೆ ತೊಂದರೆ ಕೊಡಲು ಸುಳ್ಳು ದೂರು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ನಾನು ಕೃತ್ಯ ನಡೆದ ಸ್ಥಳ ನೋಡಿರುವುದಿಲ್ಲ ಮತ್ತು ಶವ ಮತ್ತು ಮೋಟಾರ್ ಬೈಕ್ ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಮೋಟಾರ್ ಸೈಕಲ್ ನ್ನು ಯಾಕಾರ್ಲಹಳ್ಳಿ ಯ ಹೊಂಗೆ ಹತ್ತಿರ ನೋಡಿರುತ್ತೇನೆ. ಸದರಿ ಬೈಕು ನನಗೆ ಸಂಬಂದಪಟ್ಟಿದ್ದು ಅಲ್ಲ ಎಂದರೆ ಅದನ್ನು ನಾನು ಬೇರೆಯವರ ಬಳಿ ಖರೀದಿ ಮಾಡಿರುತ್ತೇನೆ. ಖರೀದಿ ಮಾಡಿದ ಬಗ್ಗೆ ನನ್ನ ಬಳಿ ದಾಖಲೆ ಇರುತ್ತದೆ. ನಿಪಿ-16 ರಿಂದ ನಿಪಿ-19 ಪೊಟೋಗಳನ್ನು ನಾನು ಸ್ಥಳದಲ್ಲಿ ತೆಗೆದುಕೊಂಡಿರುತ್ತೇನೆಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಆರೋಪಿತರು ಬಂದೂಕಿನಿಂದ ಸುದೀಪನಿಗೆ ಹೊಡೆದಿರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ರಾಜಕೀಯ ಪ್ರಭಾವ ಬೀರಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರ ಜೊತೆ ಸುದೀಪನು ಹೋಗುವುದನ್ನು ನಾನು ಆಗಲೀ , ಬೇರೆ ಯಾರೇ ಆಗಲೀ ನೋಡಿರುವುದಿಲ್ಲ ಮತ್ತು ಸುದೀಪ ಆರೋಪಿತರ ಜೊತೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಊರಿನ ಮುಖ್ಯ ರಸ್ತೆಯಲ್ಲಿ ಪುಟ್ಟಹೊಬಳಪ್ಪ , ಲಕ್ಷ್ಮಮ್ಮ , ಕೃಷ್ಣಪ್ಪ ಮತ್ತು ಮಂಜುನಾಥ ರವರ ಅಂಗಡಿಗಳು ಇರುತ್ತವೆ ಎನ್ನುವುದು ನಿಜ. ರಸ್ತೆ ಮೇಲೆ ಜನಗಳು ಇರುತ್ತಾರೆ ಎನ್ನುವುದು ನಿಜ. ಸಾಯಂಕಾಲ 7-30 ಗಂಟೆಗೆ ಜನ ಓಡಾಡುತ್ತಾರೆ ಎಂದರೆ ನಿಜ. ಆರೋಪಿತರು ಸುದೀಪನನ್ನು ಕರೆದುಕೊಂಡು ಹೋಗುವುದನ್ನು ಸುಮಾರು 20-25 ಜನ ನೋಡಿರುತ್ತಾರೆ. ಆರೋಪಿತರು ಸುದೀಪನನ್ನು ಕರೆದುಕೊಂಡು ಹೋಗುವುದನ್ನು ಸುಮಾರು 20-25 ಜನ ನೋಡಿರುತ್ತಾರೆಂದು ನಾನು ಪೊಲೀಸರ ಮುಂದೆ ಹೇಳಿರುವುದಿಲ್ಲ. ನಾವು ಪೊಲೀಸರ ಜೊತೆ ಶಾಮಿಲಾಗಿ ಈ ಪ್ರಕರಣವನ್ನು ಸೃಷ್ಟಿಮಾಡಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**